NP – 024

# IV Semester B.C.A. Examination, July/August 2024
## (NEP)
## ಕನ್ನಡ ಭಾಷಾ ಪಠ್ಯ ಪತ್ರಿಕೆ – 4
## ಗಣಕ ಕನ್ನಡ – 4

ಸಮಯ : 2½ ಗಂಟೆಗಳು | ಗರಿಷ್ಠಾಂಕಗಳು : 60

I. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (**200** ಪದಗಳಿಗೆ ಮೀರದಂತೆ) **(2×10=20)**

1) 'ಲಿಜ್ಜತ್ ಪಾಪಡ್' ಮಹಿಳಾ ಸಶಕ್ತೀಕರಣದ ಉತ್ತಮ ಉದಾಹರಣೆ ಎಂಬುದನ್ನು ನಿರೂಪಿಸಿ.

2) 'ವಿಜ್ಞಾನ ಸಾಹಿತ್ಯದ ಅನುವಾದಗಳ ವೈವಿಧ್ಯ' ಕುರಿತು ವಿವರಿಸಿ.

3) 'ನಾಗಣ್ಣನ ಕನ್ನಡಕ' ಕವಿತೆಯನ್ನು ಕುರಿತು ವಿಶ್ಲೇಷಿಸಿ.

II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (**100** ಪದಗಳಿಗೆ ಮೀರದಂತೆ) **(4×5=20)**

1) ಕಪಿನಪ್ಪನ ಎಮ್ಮೆಗೆ ಪಶುವೈದ್ಯರು ಚಿಕಿತ್ಸೆ ನೀಡಿದ ಬಗೆ ಹೇಗೆ ?

2) 'ಮಳೆಯ ಜಾಡಿನಲ್ಲಿ ಡಾಂಟೆ ಮತ್ತು ಇತ್ಯಾದಿ' ಕವಿತೆಯ ಆರಂಭದಲ್ಲಿ ರಾತ್ರಿಯನ್ನು ಹೇಗೆ ವರ್ಣಿಸಲಾಗಿದೆ ?

3) ದಗ್ಗೀರಜ್ಜ ಹಾಗೂ ಪುಟ್ಟಾಲಯ್ಯನ ಭಾವನಾತ್ಮಕ ಸಂಬಂಧ ಕುರಿತು ಬರೆಯಿರಿ.

4) ಜೋಗೇರವನ ಹತ್ತಿರ ತಂದ ಹಳೆಯ ಚಾಳೀಸಿನ ವಿಶೇಷತೆಯೇನು ?

5) 'ವಾಗಕ್ಷರ'ದ ಇತಿಮಿತಿಗಳಾವುವು ?

III. ಕೆಳಕಂಡ ಕಂಡಿಕೆಯನ್ನು **ಇಂಗ್ಲಿಷ್**ಗೆ ಭಾಷಾಂತರಿಸಿ. **(1×4=4)**

ಗಂಡನ ಮರೆಗುಳಿತನಕ್ಕೆ ಹರಿಣಾಬಾಯಿ ರೇಗಿದಳು. ಎಷ್ಟು ರೇಗಿದರೇನು ಪ್ರಯೋಜನ ? ವಯೋಮಾನದ ಗುಣ, ಚಾಳೀಸೊಂದು ಇರೋದ್ರಿಂದ ಹಂಗಿಲ್ಲದೆ ಊರೆಲ್ಲ ಸುತ್ತಾಡಿ ಬರುತ್ತಾರೆ. ವರ್ತಮಾನ ಪತ್ರ, ಮಾಸಿಕಗಳನ್ನು ಓದಿ ಕಾಲ ಕಳೆಯುತ್ತಾರೆ. ರಾಸೂರಂಥ ಊರಲ್ಲಿ ತಕ್ಷಣಕ್ಕೆ ಹೊಸ ಚಾಳೀಸು ಮಾಡಿಸಬೇಕೆಂದರೂ ಸಾಧ್ಯವಿಲ್ಲ. ಪೂಜಾರಿ ಡಾಕ್ಟರ್ ಬಂದಾಗ ಚಾಳೀಸಿನ ನಂಬರ ತೆಗೆಸಬೇಕು. ರಂಗನಾಥ ಬಂದಾಗ ಅವನಿಗೆ ನಂಬರ್ ಕೊಡಬೇಕು.

IV. 'ರಮ್ಯಾ' ಎಂಬ ಕಾಲ್ಪನಿಕ ಹೆಸರಿನಲ್ಲಿ ಕಂಪನಿಯೊಂದರ 'ಡೇಟಾ ವಿಶ್ಲೇಷಕರ' ಹುದ್ದೆಗೆ ಅಭ್ಯರ್ಥನ ಪತ್ರ ತಯಾರಿಸಿ. **(1×4=4)**

V. ಕೆಳಕಂಡ ಚಿತ್ರ/ಸನ್ನಿವೇಶ ಆಧರಿಸಿ ಒಂದು ಕವಿತೆ/ಕತೆ ಬರೆದು ಸೂಕ್ತ ಶೀರ್ಷಿಕೆ ನೀಡಿ. (**90** ಪದಗಳಿಗೆ ಮೀರದಂತೆ) **(1×4=4)**

ಮಳೆಗಾಗಿ ಆಕಾಶ ನೋಡುತ್ತಿರುವ ರೈತ.

P.T.O.

VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ, ಸೂಕ್ತ ಶೀರ್ಷಿಕೆ ನೀಡಿ. **(1×4=4)**

'ನನ್ನಜ್ಜ ಎರಡು ಮದುವೆ ಆಗಿದ್ದ ಸಾರ್' ಎಂದ ಕಪಿನಪ್ಪ, ನಾನು ಸುಮ್ಮನಿದ್ದೆ. 'ನಮ್ಮಪ್ಪನೂ ಅಷ್ಟೇ, ಎರಡು ಮದುವೆ ಮಾಡ್ಕಂಡಿದ್ದ' ಎಂದ 'ನಮ್ಮಣ್ಣನೂ ಎರಡು ಮದುವೆ ಮಾಡ್ಕಂಡಿದಾನೆ ಸಾರ್' 'ಪಕ್ಕದ್ಮನೇಲಿ ಬೇಕಿದ್ರೆ ನೋಡ್ಕಂಡು ಬನ್ನಿ, ಕುಡುದ್ದೇಲೆ ನಾನು ಸುಳ್ಳೇಳಕ್ಕಿಲ್ಲ ಸಾರ್' ಎಂದ. ನಾನು ಸುಮ್ಮನಿದ್ದೆ. ಇದೆಲ್ಲ ಯಾಕೆ ಹೇಳುತ್ತಿದ್ದಾನೋ ಎಂಬುದು ಗೊತ್ತಾಗಲಿಲ್ಲ. ಕಪಿನಪ್ಪ ಮುಂದುವರಿದು, 'ನಾನೆರಡು ಮದುವೆ ಆಗಿದಿನಿ ಅಂತ ಬೈಕೋಬೇಡಿ'. ನಾನು ಉತ್ತರಿಸುವುದೇನೂ ಇರಲಿಲ್ಲ. 'ನಂದೇನೂ ತಪ್ಪಿಲ್ಲ ಸಾರ್, ಅದ್ಯಾರೋ ಮೆಂಡ್ಲ ಅನ್ನೋ ವಿಜ್ಞಾನಿ ಎಲ್ಲ ಹೇಳವ್ರುನಂತಲ್ಲ. ಗುಣಗಳು ಅಪ್ಪಿಂದ ಮಕ್ಳಿಗೆ ಬರ್ತವೆ, ಮಕ್ಳಿಂದ ಮೊಮ್ಮಕ್ಳಿಗೆ ಬರ್ತವೆ ಅಂತ. ಹೆರ್ಡಿಟಿ ಸಾರ್, ಹೆರ್ಡಿಟಿ ಬಾಳ ಡೇಂಜರ್ ಸಾರ್, ಅದಕ್ಕೆ ನನಗೆ ಎರಡು ಮದುವೆ'.

VII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರುತಿಸಿ ಬರೆಯಿರಿ : (**ಎಲ್ಲಾ ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ.) **(4×1=4)**

1) ಸಂಜೆ ಯಾವ ನಿರೀಕ್ಷೆ ಇರಲಿಲ್ಲ ?

ಎ) ನಿದ್ದೆಯ ಬಿ) ಮಳೆಯ

ಸಿ) ಬೆಳದಿಂಗಳ ಡಿ) ಬಿಸಿಲಿನ

2) ದಗ್ಗೀರಜ್ಜನ ಹೆಂಡತಿಯ ಹೆಸರೇನು ?

ಎ) ಬೋಜಮ್ಮ ಬಿ) ಹುಚ್ಚೀರಮ್ಮ

ಸಿ) ಲಕ್ಕಮ್ಮ ಡಿ) ಲಕ್ಕಿಯಜ್ಜಿ

3) 'ಕನ್ನಡ ಗಣಕ ಪರಿಷತ್'ನ ಸ್ಥಾಪಕ ಕಾರ್ಯದರ್ಶಿ ಯಾರು ?

ಎ) ದೀಪಕ್ ಕರಾಡೆ ಬಿ) ರಂಗನಾಥ್

ಸಿ) ಜಿ. ಎನ್. ನರಸಿಂಹಮೂರ್ತಿ ಡಿ) ಅನಂತರಾಮು

4) ಕಪಿನಪ್ಪನ ಎಮ್ಮೆಗೆ ಚಿಕಿತ್ಸೆ ನಡೆಯುವಾಗ ತಲೆಸುತ್ತಿ ಬಿದ್ದವರು ಯಾರು ?

ಎ) ಪಶುವೈದ್ಯರು ಬಿ) ಮಾಯಣ್ಣ

ಸಿ) ಅಂಗಡಿ ಮಾಯಣ್ಣ ಡಿ) ಅಂಗಡಿ ಕೃಷ್ಣ

---